ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ-584 133, ರಾಯಚೂರು, ಕರ್ನಾಟಕ, ಭಾರತ
ಆಡಳಿತ ವಿಭಾಗ /Administration Section E-mail:registrarrur@gmail.com

ಸಂಖ್ಯೆ:ರಾವಿರಾ/ಆಡಳಿತ/ಅಉ/2022-23/1206 ದಿನಾಂಕ: 16.11.2022

**ಅಧಿಸೂಚನೆ**

ವಿಷಯ: 2022-23ನೇ ಸಾಲಿಗಾಗಿ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಅರ್ಜಿ ಆಹ್ವಾನ.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16.11.022.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಯಚೂರು ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಅಗತ್ಯತೆಗನುಸಾರವಾಗಿ ಬೋಧನಾ ಕಾರ್ಯದ ನಿರ್ವಹಣೆಗಾಗಿ ಪೂರ್ಣಕಾಲಿಕ/ ಅರೆಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗಳಿಗಾಗಿ ವಿವಿಧ ವಿಷಯಗಳ ಬೋಧನಾ ಕಾರ್ಯಕ್ಕನುಗುಣವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಸ್ನಾತಕೋತ್ತರ ವಿಭಾಗಗಳು ಹಾಗೂ ಹುದ್ದೆಗಳ ವಿವರ**

| ಕ್ರ.ಸಂ | ಸ್ನಾತಕೋತ್ತರ ವಿಭಾಗಗಳು | ಅಂದಾಜು | |
|---|---|---|---|
| | | ಪೂರ್ಣಕಾಲಿಕ | ಅರೆಕಾಲಿಕ |
| 1 | ಕನ್ನಡ | 03 | 01 |
| 2 | ಇಂಗ್ಲೀಷ | 03 | – |
| 3 | ಉರ್ದು & ಪರ್ಶಿಯನ್ | 02 | 01 |
| 4 | ಅರ್ಥಶಾಸ್ತ್ರ | 03 | – |
| 5 | ಇತಿಹಾಸ | 03 | – |
| 6 | ರಾಜ್ಯಶಾಸ್ತ್ರ | 03 | – |
| 7 | ಸಮಾಜಶಾಸ್ತ್ರ | 02 | 01 |
| 8 | ಸಮಾಜ ಕಾರ್ಯ | 04 | 01 |
| 9 | ಮಹಿಳಾ ಅಧ್ಯಯನ | 03 | 01 |
| 10 | ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ | 04 | 01 |
| 11 | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | 03 | – |
| 12 | ರಸಾಯನ ಶಾಸ್ತ್ರ | 04 | 01 |
| 13 | ಗಣಕ ವಿಜ್ಞಾನ | 02 | 04 |
| 14 | ಗಣಿತ | 02 | 02 |
| 15 | ಭೌತಶಾಸ್ತ್ರ | 03 | 02 |
| 16 | ಸಸ್ಯಶಾಸ್ತ್ರ | 04 | 01 |
| 17 | ಪ್ರಾಣಿಶಾಸ್ತ್ರ | 04 | 01 |
| 18 | ಸೂಕ್ಷ್ಮ ಜೀವಶಾಸ್ತ್ರ | 04 | 01 |
| 19 | ಉಪಕರಣಾತ್ಮಕ ತಂತ್ರಜ್ಞಾನ | – | 04 |
| 20 | ವಾಣಿಜ್ಯ | 04 | – |
| | | **60***| **22*** |
| | **ಒಟ್ಟು** | **82** | |

*** ಮೇಲೆ ತಿಳಿಸಿದ ಅತಿಥಿ ಉಪನ್ಯಾಸಕರ ಕಾರ್ಯಭಾರವು ವಿಭಾಗವಾರು ಹಂಚಿಕೆಯಾಗಿದ್ದು, ಇದರಲ್ಲಿ ಯಾವುದೇ ವ್ಯತ್ಯಾಸಗಳಾದರೆ ವಿಶ್ವವಿದ್ಯಾಲಯವು ಈ ಸಂಖ್ಯೆಯಲ್ಲಿ (ಹೆಚ್ಚು/ಕಡಿಮೆ) ಬದಲಾವಣೆಯನ್ನು ಮಾಡುವ ಅಧಿಕಾರ ಹೊಂದಿದೆ. ಇದರಲ್ಲಿ ವಿಶ್ವವಿದ್ಯಾಲಯದ ನಿಲುವು ಅಂತಿಮವಾಗಿರುತ್ತದೆ.**

| | | | |
|---|---|---|---|
| ವಿಕಲಚೇತನರು | : 05% | – | 04 |
| ಅ. ಸಾಮಾನ್ಯ ವರ್ಗ | : 44% | – | 34 |
| ಆ. ಪರಿಶಿಷ್ಟ ಜಾತಿ | : 17% | – | 13 |
| ಇ. ಪರಿಶಿಷ್ಟ ವರ್ಗ | : 07% | – | 06 |
| ಈ. ಪ್ರವರ್ಗ I | : 04% | – | 03 |
| ಉ. ಪ್ರವರ್ಗ II A | : 15% | – | 12 |
| ಊ. ಪ್ರವರ್ಗ II B | : 04% | – | 03 |
| ಋ. ಪ್ರವರ್ಗ III A | : 04% | – | 03 |
| ೠ. ಪ್ರವರ್ಗ III B | : 05% | – | 04 |
| **ಒಟ್ಟು** | | – | **82** |

**<u>ಅಭ್ಯರ್ಥಿಗಳಿಗೆ ಸೂಚನೆ:</u>**

1. ಅತಿಥಿ ಉಪನ್ಯಾಸಕರನ್ನು ಯು.ಜಿ.ಸಿ. ಹಾಗೂ ಕಾಲಕಾಲಕ್ಕೆ ಹೊರಡಿಸುವ ಸರಕಾರಿ ನಿಯಮಾವಳಿಯ ಪ್ರಕಾರ ನೇಮಕ ಮಾಡಲಾಗುವುದು.
2. ಈ ಹುದ್ದೆಗಳು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, 2022–23ನೇ ಶೈಕ್ಷಣಿಕ ಸಾಲಿಗೆ ಮಾತ್ರ ಸೀಮಿತವಾಗಿರುತ್ತದೆ ಹಾಗೂ ಯಾವುದೇ ಮಂಜೂರಾದ ಹುದ್ದೆಗಳಿಗೆ ವಿರುದ್ಧವಾಗಿರುವುದಿಲ್ಲ ಮತ್ತು ಸೂಚಿಸಲಾದ ಹುದ್ದೆಗಳ ಸಂಖ್ಯೆಯು ತಾತ್ಕಾಲಿಕವಾಗಿದ್ದು, ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ನೇಮಿಸಿಕೊಳ್ಳಲಾಗುವುದು. (Against the workload but not against the sanctioned post).
3. ಅಧಿಸೂಚನೆಯಲ್ಲಿ ಪ್ರಕಟಿಸಿದ ಹುದ್ದೆಗಳನ್ನು ಭರ್ತಿಮಾಡುವ ಅಥವಾ ಭರ್ತಿ ಮಾಡದೇ ಇರುವ ಅಧಿಕಾರವನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿದೆ.
4. ಆಯ್ಕೆಯಾದ ಅಭ್ಯರ್ಥಿಗಳ ಸೇವೆಯು ತೃಪ್ತಿಕರವಾಗಿರದಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಕೆಲಸದಿಂದ ವಜಾ ಮಾಡುವ ಅಧಿಕಾರ ವಿಶ್ವವಿದಾಲಯ ಹೊಂದಿದೆ.
5. ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಅಭ್ಯರ್ಥಿಗಳು ನೇಮಕಾತಿಯೆಂದು ಭಾವಿಸತಕ್ಕದ್ದಲ್ಲ.
6. ನಿಗದಿತ ಅರ್ಜಿ ನಮೂನೆಗಳು, ವಿವಿಧ ವಿಭಾಗಗಳ ವಿವರ ಹಾಗೂ ಇನ್ನಿತರೆ ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಅಂತರ್ಜಾಲ **https://raichuruniversity.ac.in/** ನೋಡತಕ್ಕದ್ದು ಹಾಗೂ ಅರ್ಜಿಗಳನ್ನು ಡೌನ್‌ಲೋಡ್ ಮಾಡತಕ್ಕದ್ದು, ಭರ್ತಿ ಮಾಡಿದ ಅರ್ಜಿ, ಜಾತಿ ಪ್ರಮಾಣ ಪತ್ರ ಮತ್ತು ಸಂಬಂಧಿಸಿದ ದಾಖಲೆಗಳ ಸ್ವ–ದೃಢೀಕೃತ ಪ್ರತಿಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
7. ಸಂದರ್ಶನದ ವೇಳೆಯಲ್ಲಿ ಅಭ್ಯರ್ಥಿಗಳು ತಮ್ಮ ಎಲ್ಲಾ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.
8. ಪ.ಜಾ/ಪ.ಪಂ, ಪ್ರವರ್ಗ–1 ಅಭ್ಯರ್ಥಿಗಳಿಗೆ ರೂ. 500/–, ಸಾಮಾನ್ಯ ಹಾಗೂ ಇತರೆ ಅಭ್ಯರ್ಥಿಗಳಿಗೆ ರೂ. 750/– ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ. ಸದರಿ ಅಭ್ಯರ್ಥಿಗಳು ತಮ್ಮ ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಿದ್ದಲ್ಲಿ ಮಾತ್ರ ಮೀಸಲಾತಿಗೆ ಅರ್ಹರಿರುತ್ತಾರೆ.
9. ಭರ್ತಿ ಮಾಡಿದ ಅರ್ಜಿಯೊಂದಿಗೆ ನಿಗದಿತ ಶುಲ್ಕದ ಪ್ರತಿ ಅಥವಾ D.D.ಯನ್ನು **ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು** ಇವರ ಹೆಸರಿನಲ್ಲಿ ಪಡೆದು ಲಗತ್ತಿಸಬೇಕು ಅಥವಾ ವಿಶ್ವವಿದ್ಯಾಲಯದ ಯೂನಿಯನ್ ಬ್ಯಾಂಕ್ ಖಾತೆ ಸಂಖ್ಯೆ: **049112010000093** ಗೆ (IFSC: **UBIN0804916**) ಹಣ ಪಾವತಿಸಿದ ರಸೀದಿಯ ಪ್ರತಿಯನ್ನು ಲಗತ್ತಿಸತಕ್ಕದ್ದು.
10. ಸಂದರ್ಶನದ ದಿನಾಂಕ ಮತ್ತು ಸಮಯವನ್ನು ಹಾಗೂ ಇದಕ್ಕೆ ಸಂಬಂಧಿಸಿದ ಇನ್ನಿತರೆ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ (https://raichuruniversity.ac.in/) ಪ್ರಕಟಿಸಲಾಗುವುದು, ಅಭ್ಯರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್ ಗಮನಿಸಲು ತಿಳಿಸಲಾಗಿದೆ. **ಈ ಸಂಬಂಧ ಯಾವುದೇ ತರಹದ ಮಾಹಿತಿಯನ್ನು ವೈಯಕ್ತಿಕವಾಗಿ ತಿಳಿಸಲಾಗುವುದಿಲ್ಲ**. ಸಂದರ್ಶನಕ್ಕಾಗಿ ವಿಶ್ವವಿದ್ಯಾಲಯದಿಂದ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.
11. ಮೇಲ್ಕಂಡ ಎಲ್ಲಾ ದಾಖಲೆಗಳನ್ನು ದಿನಾಂಕ: 27–11–2022 ರೊಳಗಾಗಿ ಸಂಬಂಧಿಸಿದ ವಿಭಾಗಗಳ **ಮುಖ್ಯಸ್ಥರು,** ______________ ವಿಭಾಗ, ರಾಯಚೂರು ವಿಶ್ವವಿದ್ಯಾಲಯ**, ಕೃಷ್ಣ–ತುಂಗ ಆವರಣ, ಮಂತ್ರಾಲಯ ರಸ್ತೆ, ಯರಗೇರಾ 584133, ರಾಯಚೂರು ಕರ್ನಾಟಕ,** ಇವರಿಗೆ ಖುದ್ದಾಗಿ/ರಿಜಿಸ್ಟರ್ಡ್ ಅಂಚೆ ಮುಖಾಂತರ ಸಲ್ಲಿಸತಕ್ಕದ್ದು. (ಕೋರಿಯರ್ ಸರ್ವಿಸ್ ಇರುವುದಿಲ್ಲ)
12. ಅಂಚೆ ಸೇವೆಯಲ್ಲಿ ವಿಳಂಬವಾದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರರಾಗುವುದಿಲ್ಲ.
13. ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
14. ಆಯ್ಕೆ ಪ್ರಕ್ರಿಯೆಯು ಪ್ರಸ್ತುತ ಜಾರಿಯಿರುವ ಸರಕಾರದ ನಿಯಮಾವಳಿಗಳನ್ವಯ ಅರ್ಹತೆ (ಮೆರಿಟ್) ಹಾಗೂ ಮೀಸಲಾತಿ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸಲಾಗುವುದು.
15. ಸಂದರ್ಶನದ ವೇಳೆಯಲ್ಲಿ ಅಭ್ಯರ್ಥಿಗಳು ಸಲ್ಲಿಸಿರುವ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲಿಸಲಾಗುವುದು.
16. ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ವಿಭಾಗದ ಮುಖ್ಯಸ್ಥರು ನೀಡುವ ಬೋಧನಾ ಕಾರ್ಯದ ಜೊತೆಗೆ ಇತರೆ ಕಚೇರಿ ಕೆಲಸಗಳನ್ನು ನಿಷ್ಠೆಯಿಂದ ಪಾಲಿಸಬೇಕು.
17. ವಿಶ್ವವಿದ್ಯಾಲಯವು ನಡೆಸುವ ತಾತ್ಕಾಲಿಕ ಉಪನ್ಯಾಸಕರ ನೇಮಕದ ಸಂದರ್ಶನವು ವಿಶ್ವವಿದ್ಯಾಲಯದ ವಿವೇಚನೆಗೆ ಒಳಪಟ್ಟಿರುತ್ತದೆ.
18. ಅತಿಥಿ ಉಪನ್ಯಾಸಕರ ಕಾರ್ಯಭಾರವನ್ನು ಬದಲಾಯಿಸುವ ಅಧಿಕಾರ ವಿಶ್ವವಿದ್ಯಾಲಯದ ವಿವೇಚನೆಗೆ ಒಳಪಟ್ಟಿರುತ್ತದೆ.
19. ಆಯ್ಕೆಯಾದ ಅತಿಥಿ ಉಪನ್ಯಾಸಕರಿಗೆ ಸಂಭಾವನೆ/ಗೌರವಧನ ಅರ್ಹತೆಗೆ ತಕ್ಕಂತೆ ನಿಗದಿಪಡಿಸಲಾಗುವುದು.
20. ಪೂರ್ಣಕಾಲಿಕ ಅತಿಥಿ ಉಪನ್ಯಾಸಕರು ಕಚೇರಿಯ ಕೆಲಸದ ಅವಧಿಯಲ್ಲಿ ಕಡ್ಡಾಯವಾಗಿ ವಿಶ್ವವಿದ್ಯಾಲಯದಲ್ಲಿ ಹಾಜರಿರತಕ್ಕದ್ದು.

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

**<u>ಪ್ರತಿಗಳು:</u>**

1) ಎಲ್ಲಾ ವಿಭಾಗದ ಮುಖ್ಯಸ್ಥರುಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2) ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರಿಗೆ
3) ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
4) ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5) ಮುಖ್ಯಸ್ಥರು, ಕಂಪ್ಯೂಟರ್ ಸೆಂಟರ್ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.
6) ಕಛೇರಿ ಪ್ರತಿ.